# ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಇಂದು ನಡೆಸಿದ ಮಹತ್ತರ ಕಾರ್ಯಾಚರಣೆಯಲ್ಲಿ, ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ 100 ಕ್ಕೂ ಹೆಚ್ಚು ವ್ಯಾಪಾರ ಸ್ಥಳಗಳ ( ಅವುಗಳಲ್ಲಿ ಕೆಲವು ಅಘೋಷಿತ ವ್ಯಾಪಾರ ಸ್ಥಳಗಳು) ಮೇಲೆ ಏಕಕಾಲದಲ್ಲಿ ದಾಳಿ ನಡೆಸಿ ತೆರಿಗೆ ವಂಚನೆಯನ್ನು ಪತ್ತೆಹಚ್ಚಲು ಯಶಸ್ವಿಯಾಗಿದ್ದಾರೆ, ಮುಂದುವರೆದು, ಇಲಾಖೆಯು ತೆರಿಗೆ ವಂಚನೆಯ ಪ್ರಮಾಣವನ್ನು, ಪತ್ತೆಹಚ್ಚಲು ಹಣಕಾಸಿನ ದಾಖಲೆಗಳು ಹಾಗೂ ಇತರೆ ಮಾಹಿತಿಗಳನ್ನು ಪರಿಶೀಲಿಸುತ್ತಿದೆ.

ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ಕೆಲವು ವ್ಯಾಪಾರ ಸ್ಥಳಗಳಲ್ಲಿ, ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅಘೋಷಿತ ಗೋದಾಮುಗಳಲ್ಲಿ ಶೇಖರಿಸಿ, ಜಿಎಸ್‌ಟಿ ಇನ್‌ವಾಯ್ಸ್ ಗಳನ್ನು ನೀಡದೆ ವ್ಯಾಪಾರ ನಡೆಸಿ, ತೆರಿಗೆ ವಂಚಿಸಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಮಾಡುತ್ತಿರುವ ಮಾಹಿತಿಯನ್ನು, ನಂಬಲರ್ಹ ಮೂಲಗಳ ಮೂಲಕ ಪಡೆದು ಸದರಿ ಕಾರ್ಯಾಚರಣೆಯನ್ನು ನಡೆಸಲಾಗಿದೆ.

ಮುಂದುವರೆದು, ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದ ಅನ್ವಯ, ತೆರಿಗದಾಯಕ ವ್ಯಕ್ತಿಗಳು, ತಮ್ಮ ನೋಂದಾಯಿತ ವ್ಯಾಪಾರ ಸ್ಥಳಗಳು ಹಾಗೂ ಹೆಚ್ಚುವರಿ ವ್ಯಾಪಾರ ಸ್ಥಳಗಳನ್ನು ಘೋಷಿಸುಕೊಳ್ಳಲು, ಹಾಗು ಅಲ್ಲಿ ಜಿಎಸ್‌ಟಿ ನೋಂದಣಿ ಪ್ರಮಾಣ ಪತ್ರವನ್ನು ಹಾಗೂ ಸಂಖ್ಯೆಯನ್ನು ಪ್ರದರ್ಶಿಸಲು ವಿಫಲರಾಗಿದ್ದು, ಸದರಿ ವ್ಯಕ್ತಿಗಳಿಗೆ ಕಾನೂನಿನ ಅಡಿಯಲ್ಲಿ ದಂಡವನ್ನು ಸಹ ವಿಧಿಸಲಾಗಿದೆ.

ಕರ್ನಾಟಕದ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯು, ತೆರಿಗೆಯಲ್ಲಿ ಪಾರದರ್ಶಕತೆ, ನ್ಯಾಯಸಮ್ಮತತೆ ಮತ್ತು ಅನುಸರಣೆಯ ತತ್ವಗಳನ್ನು ಎತ್ತಿಹಿಡಿಯಲು ಬದ್ಧವಾಗಿದೆ. ಈ ಕಾರ್ಯಾಚರಣೆಯ ಮೂಲಕ ತೆರಿಗೆ ದಾಯಕ ವ್ಯಕ್ತಿಗಳು ಜಿಎಸ್‌ಟಿ ನಿಯಮಗಳಿಗೆ ಬದ್ಧವಾಗಿರಲು ಮತ್ತು ತಮ್ಮ ತೆರಿಗೆ ಬಾಧ್ಯತೆಗಳನ್ನು ಶ್ರದ್ಧೆಯಿಂದ ಪೂರೈಸಲು, ಜಿಎಸ್‌ಟಿ-ಸಂಬಂಧಿತ ಮಾಹಿತಿಯನ್ನು ತಮ್ಮ ವ್ಯಾಪಾರ ಸ್ಥಳಗಳಲ್ಲಿ ಮತ್ತು ಹೆಚ್ಚುವರಿ ವ್ಯಾಪಾರದ ಸ್ಥಳಗಳಲ್ಲಿ, ಪ್ರಮುಖವಾಗಿ ಪ್ರದರ್ಶಿಸುವುದನ್ನು ಕಡ್ಡಾಯ ಪಡಿಸುತ್ತದೆ. ತಪ್ಪಿದ್ದಲ್ಲಿ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

**(ಸಿ.ಶಿಖಾ)**

**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)**

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು